ಶ್ರೀ ರಾಮಕೃಷ್ಣ ಹೆಗ್ಗಡೆ.—ಕೆಲವು ಕೆಲಸಗಳನ್ನು ನಿರೀಕ್ಷೆ ಮಾಡಿದಂತೆ ಮಾಡಲು ಸಾಧ್ಯವಾಗುವುದಿಲ್ಲ. ಉದಾಹರಣೆಯಾಗಿ ಸಿಮೆಂಟು ಕೋಟಾ ತೊಂದರೆಗಳು ಇತ್ಯಾದಿ ಗಮನದಲ್ಲಿ ಇರಲಿಲ್ಲ.

ಶ್ರೀ ಎಂ. ಸಿ. ಬನಪ್ಪ.—ಈ ತೊಂದರೆಗಳನ್ನೆಲ್ಲಾ ಪರಿಹಾರ ಮಾಡಿ, ಈ ಕೆಲಸ ಮುಗಿಸಲು ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದಷ್ಟು ಬೇಗನೆ ಮುಗಿಸಬೇಕೆಂದಿದ್ದೇವೆ. ಈಗಾಗಲೇ ಇದಕ್ಕೆ 8,000 ರೂಪಾಯಿಗಳಷ್ಟು ಖರ್ಚಾಗಿದೆ.

Stopping of the Malnad Improvement Grant.

*Q.—125. **Smt. B. L. SUBBAMMA** (Chickmagalur).—

Will the Government be pleased to state :—

(*a*) whether they are aware that Malnad is very backward, lacking in communication facilities like roads and bridges ;

(*b*) the reasons for stopping the Malnad Improvement grant which was being given to Malnad areas from 1958 ;

(*c*) whether they intend to provide a special grant at least in future ?

*A.—**Sri RAMAKRISHNA HEGDE** (Minister for Co-operation and Development).—

(*a*) Yes. parts of Malnad are backward in communication facilities.

(*b*) No separate grant was being provided for the improvement of Malnad since the State Reorganisation on 1st November 1956 and, therefore, there was no question of stopping the same from 1958.

(*c*) Not in the immediate future, as due to emergency the programme of rural roads is deferred.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಮಲೆನಾಡು ಭಾಗ ಬಹಳ ಹಿಂದುಳಿದಿದೆ ಎಂದು ಇದಕ್ಕೆ ಪ್ರತ್ಯೇಕವಾದ ಬೋರ್ಡನ್ನು ಮಾಡಿರಲಿಲ್ಲವೇ ? ಈಗ ಮಲೆನಾಡನ್ನು ಅಭಿವೃದ್ಧಿ ಮಾಡಕೂಡದು ಎಂದು ಸರಕಾರ ಯೋಚಿಸಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಾಗೇನೂ ಅನಿಸುವುದಿಲ್ಲ. ಆದರೆ ಮಲೆನಾಡಿಗಾಗಿ ಪ್ರತ್ಯೇಕವಾಗಿ ಹಿಂದೆ ಪ್ರಾವಿಷನ್ನು ಮಾಡುತ್ತಿದ್ದಂತೆ ಈಗ ಮಾಡುತ್ತಿಲ್ಲ. ಆದರೂ ಮಲೆನಾಡನ್ನು ಅಭಿವೃದ್ಧಿ ಮಾಡಬೇಕು. ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡುವುದಿಲ್ಲ ಎಂದು ಇಲ್ಲ ಹೇಳಲಿಕ್ಕೆ ಬರುವುದಿಲ್ಲ.

Sri G. V. GOWDA.—Is the Government aware that there was a Board functioning as Malnad Development Board ?

Sri RAMAKRISHNA HEGDE.—Yes. It was constituted in 1957.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಲೆನಾಡು ಡೆವೆಲಪ್‌ಮೆಂಟು ಬೋರ್ಡು ಎಂದು ಹಿಂದೆ ಮಾಡಿ ಎಲ್ಲಾ ಭಾಗದ ಬ್ಯಾಕ್‌ವರ್ಡ್ ಏರಿಯಾಗಳನ್ನು ಡೆವಲೆಪ್‌ಮೆಂಟು ಮಾಡಬೇಕೆಂದಿದ್ದು ದನ್ನು ಈಗ ಪುನಃ Revise ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ನದ್ಯಕ್ಕೆ Revise ಮಾಡುವ ಪ್ರಪೋಸಲ್ಲುಗಳು ಸರ್ಕಾರದ ಮುಂದೆ ಇಲ್ಲ.

Sri V. S. PATIL.—Sir, the Government had constituted this Board in order to give help to the Malnad areas because they were backward

in communication. Since the re-organisation, is it the opinion of the Government that these areas have ceased to be Malnad or that they have improved ? What is the opinion of the present Government ?

Sri RAMAKRISHNA HEGDE.—Sir, it is not the opinion that these areas cease to be Malnad area ; it cannot happen because they are Malnad by nature. We have constituted a State Development Council which is for the development of all areas including Malnad areas. Therefore, it was felt that there was no necessity for the Malnad Board separately.

Sri M. RAJASEKHARA MURTHY.—May I know in which year the Malnad Development Board was disallowed ?

Sri RAMAKRISHNA HEGDE.—Subject to correction, it was in 1961.

ಶ್ರೀಮತಿ ಬಿ. ಎರ್. ಸುಬ್ಬಮ್ಮ.—ಮಲೆನಾಡಿನ ಪ್ರದೇಶ ಬಹಳ ಹಿಂದುಳಿದಿರುವುದರಿಂದ ಈ ಪ್ರದೇಶಕ್ಕೆ ಹೆಚ್ಚಿನ ಗ್ರಾಂಟನ್ನು ಕೊಟ್ಟು ಇತರ ಸಹಾಯ ಸೌಕರ್ಯಗಳನ್ನು ಕೊಡುವ ಬಗ್ಗೆ ಸರಕಾರದವರು ಪರಿಶೀಲಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅಗತ್ಯವಾಗಿ ಪರಿಶೀಲನೆಮಾಡುತ್ತೇವೆ. ತೊಂದರೆಯಾಗಿದೆ ಎನ್ನುವುದೂ ಗೊತ್ತಿದೆ. ಮಲೆನಾಡಿನಲ್ಲಿಯೂ ಕೆಲಸಗಳಾಗುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯೂ ಮಲೆನಾಡಿನಲ್ಲಿದೆ. ಕೆಲಕೆಲವು ದೊಡ್ಡ ಪ್ರಾಜೆಕ್ಟುಗಳ ಕೆಲಸವೂ ಮಲೆನಾಡಿನಲ್ಲಿಯೇ ನಡೆಯುತ್ತಿವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಈಚೆಗೆ ತಾವು ಪ್ರವಾಸದಲ್ಲಿ ಬಂದಿದ್ದಾಗ, ಇಲ್ಲಿರುವ ಸಂಚಾರ ಮಾರ್ಗಗಳು ಮತ್ತು ಇಲ್ಲಿನ ಜನರ ಸ್ಥಿತಿಗತಿಗಳು ಎಷ್ಟು ಮಟ್ಟಿಗೆ ಇತ್ತು ಎನ್ನುವುದನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದರಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಶಿವಮೊಗ್ಗ, ನಾರ್ತ್ ಕೆನರಾ ಹಾಗೂ ಇತರ ಜಿಲ್ಲೆಗಳಿಗೂ ಹೋಗಿ ಬಂದು ನೋಡಿದ್ದೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ತಮಗೆ ತಿಳಿದಿರುವಂತೆ ಮಲೆನಾಡಿನ ಪ್ರದೇಶಗಳು ಬಹಳ ಹಿಂದುಳಿದಿರುತ್ತವೆ. ಒಂದು ಹಳ್ಳಿಯಿಂದ ಇನ್ನೊಂದು ಕಡೆಗೆ ಹೋಗಲು ಸರಿಯಾದ ಮಾರ್ಗಗಳಿಲ್ಲದೆ ಬಹಳ ಕಷ್ಟವಾಗಿರುವುದರಿಂದ ಈ ಭಾಗಕ್ಕೆ ಜಾಸ್ತಿ ಸೌಕರ್ಯಗಳನ್ನು ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಒಂದು ಭಾಗಕ್ಕೆ ಕಡಿಮೆ ಹಿತವಾಗುವ ರೀತಿಯಲ್ಲಿ ಮಾಡಿ ಮತ್ತೊಂದು ಭಾಗಕ್ಕೆ ಅಹಿತ ಮಾಡುವುದು ನಮ್ಮ ಉದ್ದೇಶವಲ್ಲ. ಎಲ್ಲ ಭಾಗಗಳಿಗೂ ಸರಿಯಾದ ಸಮನಾದ ದೃಷ್ಟಿಯಿಟ್ಟುಕೊಂಡು ಆದಷ್ಟು ಪ್ರಗತಿಯಾಗುವಂತೆ ಡೆವಲಪ್ಪು ಮಾಡುವುದೇ ನಮ್ಮ ಅಭಿಪ್ರಾಯ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜ್ಯ ಪುನರ್ವಿಂಗಡಣೆಗೆ ಮುಂಚಿತವಾಗಿ ಮಲೆನಾಡು ಭಾಗಕ್ಕಾಗಿ ಸಾರಿಗೆ ಸೌಲಭ್ಯಗಳನ್ನು ಒದಗಿಸಲು ಖರ್ಚು ಆಗ ಕಡಿಮೆಯಾಗಿತ್ತು ಎಂದು ಈಗೇನಾದರೂ ಹೆಚ್ಚು ಖರ್ಚು ಮಾಡುತ್ತಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೆಚ್ಚಾಗಿಯೇ ಖರ್ಚಾಗುತ್ತಿದೆ.

ಶ್ರೀ ಕೆ ಎಸ್. ಸೂರ್ಯನಾರಾಯಣರಾವ್.—ಹಿಂದೆ ಇದ್ದ ಈ ಮಲೆನಾಡು ಡೆವಲಪ್ಪು ಮೆಂಟು ಬೋರ್ಡಿನವರು ಇದರ ಅಭಿವೃದ್ಧಿಗಾಗಿ ಏನಾದರೂ specific proposals ಕೊಟ್ಟಿದ್ದಾರೆಯೇ ! ಅದನ್ನು implement ಮಾಡಿದ್ದರೆ ಎಷ್ಟು ಮಾಡಿದ್ದೀರಿ !

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಮಲೆನಾಡು ಡೆವಲಪ್ಪುಮೆಂಟು ಬೋರ್ಡಿನವರು ಹಿಂದೆ ಕೆಲವು ಸೂಚನೆಗಳನ್ನು ಸರಕಾರಕ್ಕೆ ಕಳುಹಿಸಿದ್ದರು, ಅವುಗಳಲ್ಲಿ ಯಾವ ಯಾವುದನ್ನು ತೆಗೆದುಕೊಳ್ಳಬೇಕೆನ್ನುವುದನ್ನು ಮೂರನೇ ಯೋಜನೆಯಲ್ಲಿ ಸೇರಿಸಲಾಗಿದೆ. ಆ ಪ್ಲಾನನ್ನು ನೋಡಿದರೆ ಎಲ್ಲ ಗೊತ್ತಾಗುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಲೆನಾಡು ಪ್ರದೇಶದಲ್ಲಿ ಸ್ಪೆಷಲ್ ಪ್ರಾಬ್ಲಂಸ್, ಸ್ಪೆಷಲ್ ಡಿಫಿಕಲ್ಟೀಸುಗಳನ್ನು ಬಗೆಹರಿಸಬೇಕಾದರೆ Separate Treatment ಆಗಬೇಕೆಂದು ಈ ಮಲೆನಾಡು ಡೆವಲೆಪ್‌ಮೆಂಟು ಬೋರ್ಡನ್ನು ಆಗ ಮಾಡಿದ್ದರಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು.

ಶ್ರೀ ಎಚ್. ಆರ್. ಕೇಶವಮೂರ್ತಿ.—(c)ಗೆ ಉತ್ತರವಾಗಿ "Due to emergency the programme of rural roads is deferred" ಎಂದು ಇದೆ. To what extent you are forced to cut down funds allotted towards Rural Communication due to emergency ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಮರ್ಜೆನ್ಸಿ ಕಾರಣದಿಂದ ಕೆಲವು ಬಿಲ್ಡಿಂಗ್ ಪ್ರೋಗ್ರಾಂಗಳನ್ನು ನಾವು ಕಡಿಮೆ ಮಾಡಬಹುದು. Agricutual production, Industrial production ಮತ್ತು Defence purposes ಗೋಸ್ಕರ ಈ ಕೆಲಸಗಳನ್ನು ಹೆಚ್ಚು ತ್ವರಿತದಿಂದ ಮಾಡಬೇಕು ಎನ್ನುವುದು ನಮ್ಮ ಉದ್ದೇಶ.

1-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Development Council ನವರು ಮಲೆನಾಡು ಡೆವಲಪ್ ಮಾಡುವುದಕ್ಕೋಸ್ಕರ ಎಷ್ಟು ಹಣ ಇಡುವುದಕ್ಕೆ ತೀರ್ಮಾನ ತೆಗೆದು ಕೊಂಡಿದ್ದಾರೆಂಬುದನ್ನು ತಿಳಿಸಬಲ್ಲರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದರಲ್ಲಿ ಪ್ರತ್ಯೇಕವಾಗಿ ಹಣ ಒದಗಿಸಿಲ್ಲ. ಹಾಗಾದರೂ Malnad Development Board, State Development Council ನ ಒಂದು ಸಬ್-ಕಮಿಟಿ ಅಂತ ಇತ್ತು, ಡೆವಲಪ್‌ಮೆಂಟ್ ಬೋರ್ಡಿಗೆ ಪ್ರತ್ಯೇಕವಾದ ಅಸ್ತಿತ್ವ ಇರಲಿಲ್ಲ. ಪುನಃ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಸ್ಥಾಪನೆ ಮಾಡಬೇಕೆಂಬ ಅಭಿಪ್ರಾಯ ಎಲ್ಲ ಸದಸ್ಯರದು ಇದ್ದರೆ, ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಎಸ್. ಶಿವಪ್ಪ.—ಈ ತುರ್ತು ಪರಿಸ್ಥಿತಿಯಿಂದಾಗಿ ಹೆಚ್ಚಾಗಿ ಶ್ರಮಪಡಬೇಕಾದ ದೃಷ್ಟಿಯಿಂದ, ಮಲೆನಾಡು ಕಚ್ಚಾ ಪದಾರ್ಥಗಳು ಸಿಗುವ ಪ್ರದೇಶವಾಗಿರುವುದರಿಂದ ಈ ಪ್ರದೇಶವನ್ನು ಉತ್ತಮ ಪಡಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಮಲೆನಾಡು ಏರಿಯಾದಲ್ಲಿ ಹೆಚ್ಚಿನ ರಸ್ತೆ ಮಾಡುವುದು ಈ ತುರ್ತು ಪರಿಸ್ಥಿತಿಯಲ್ಲಿ ಅವಶ್ಯಕವಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಅಭಿಪ್ರಾಯ ಸ್ವಲ್ಪಮಟ್ಟಿಗೆ ಒಪ್ಪಿಕೊಳ್ಳುತ್ತೇನೆ. ಎಲ್ಲೆಲ್ಲಿ ನಮಗೆ Defence purposes ಅತ್ಯವಶ್ಯವಾಗಿ ಬೇಕಾದಂಥ ಕಚ್ಚಾ ಸಾಮಗ್ರಿಗಳು ಇರುತ್ತವೆಯೋ, ಆ ಒಂದು ದೃಷ್ಟಿಯಿಂದ ಅಂಥ ಸ್ಥಾನಕ್ಕೆ ಸ್ವಲ್ಪ ಮಟ್ಟಿಗೆ ಮಹತ್ವ ಕೊಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಿಂದಿನ ಪ್ರಶ್ನೆಯಲ್ಲಿ ತಿಳಿಸಿದ ಹಾಗೆ ಮಲೆನಾಡಿನ ವಿಶೇಷ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ, ಪ್ರತ್ಯೇಕ ಸೌಲಭ್ಯಗಳನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ, ಮಲೆನಾಡು ಡೆವಲಪ್‌ಮೆಂಟ್ ಬೋರ್ಡು ಇರಬೇಕೆಂದು ತಿಳಿಸಿದೆ. ಮಾನ್ಯ ಸದಸ್ಯರುಗಳೂ ಕೂಡ ಈ ದಿವಸ ಅದರ ಅಗತ್ಯತೆಯನ್ನು ಒತ್ತಾಯಪಡಿಸಿರುವುದರಿಂದ, ಸರ್ಕಾರದವರು ಬೋರ್ಡನ್ನು revise ಮಾಡುವ ವಿಚಾರದಲ್ಲಿ ಏನು ಹೇಳುತ್ತೀರಾ ?

ಅಧ್ಯಕ್ಷರು.—ಉತ್ತರ ಕೊಟ್ಟಿದ್ದಾರೆ, ಯೋಚನೆ ಮಾಡುತ್ತೇವೆಂದು.

ಶ್ರೀ ಎಸ್. ಗೋಪಾಲ ಗೌಡ.—ಪಂಚವಾರ್ಷಿಕ ಯೋಜನೆಯಲ್ಲಿ ಮಲೆನಾಡಿಗಾಗಿ ಏನಾದರೂ ನಿಧಿಯನ್ನು ತಾವು ಖರ್ಚು ಮಾಡುತ್ತಿರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಲೆನಾಡಿಗಾಗಿ ಪ್ರತ್ಯೇಕವಾಗಿ ಯಾವ ನಿಧಿಯನ್ನೂ ನಿಗದಿ ಮಾಡಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಮಲೆನಾಡು ಪ್ರದೇಶದಲ್ಲಿ ಮಳೆ ಹೆಚ್ಚಾಗಿ ಬೀಳುತ್ತದೆ ಮತ್ತು ಗುಡ್ಡಗಾಡು ಪ್ರದೇಶ ಎಲ್ಲಾ ಬಾಬುಗಳಲ್ಲಿಯೂ ಮಲೆನಾಡಿಗೆ ವಿಶೇಷ ಹಣ ಕೊಡಬೇಕಾಗುತ್ತದೆಂಬುದನ್ನು ಸರ್ಕಾರದವರು ಮನಗಂಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದರ ಬಗ್ಗೆ ಯಾವ ಸಂದೇಹವೂ ಇಲ್ಲ, ಸರ್ಕಾರದವರೂ ಯಾವಾಗಲೂ ಕೊಡುತ್ತಾ ಇದ್ದಾರೆ.

Sri N. O. SAMAJI.—(Marathi).

Sri RAMAKRISHNA HEGDE.—I have not got that information.

ಶ್ರೀ ಡಿ. ಪರಮೇಶ್ವರಪ್ಪ.—ಮಲೆನಾಡು ಮಾರ್ಗ, ಸಾರಿಗೆ ಮತ್ತು ಸಂಪರ್ಕ ದೃಷ್ಟಿಯಿಂದಲೂ, ಮತ್ತಿತರ ದೃಷ್ಟಿಯಿಂದಲೂ ಹಿಂದುಳಿದಿದೆ ಎಂದು ಒಪ್ಪಿಕೊಳ್ಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಎಷ್ಟು ಸಲ ಹೇಳಲಿ ಅ ಮಾತನ್ನು.

Sri N. O. SAMAJI.—(Marathi).

ಶ್ರೀ ರಾಮಕೃಷ್ಣ ಹೆಗ್ಗಡೆ.—ರೂರಲ್ ರೋಡಿಗೆ ಎಷ್ಟು ಕಡಿಮೆಯಾಗಿದೆಯೆಂದು ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಮತ್ತೊಬ್ಬ ಮಾನ್ಯಸದಸ್ಯರ ಪ್ರಶ್ನೆಗೆ ಉತ್ತರವಾಗಿ, ರಕ್ಷಣಾ ದೃಷ್ಟಿಯಿಂದ ಎಲೆಲ್ಲಿ ಅತ್ಯವಶ್ಯಕವಾದ ಕಚ್ಚಾ ಸಾಮಗ್ರಿಗಳು ಸಿಗುತ್ತವೆಯೋ, ಅಂಥ ಕಡೆಗೆ ನಾವು ಮಹತ್ವ ಕೊಡುತ್ತೇವೆಂದು ಹೇಳಿದ್ದೇನೆ.

National Scholarships allotted to the Mysore State by the Government of India.

*Q.—357. Sri SANJEEVANATH AIKALA (Suratkal).—

Will the Government be pleased to state :—

(*a*) the number of National Scholarships that were allotted to the Mysore State by the Government of India, to be awarded to the S. S. L. C. students or its equivalent for the academic year 1960-61 ;

(*b*) the number of scholarships allotted to each District in the State ;

(*c* the criteria for the selection of candidates to award these Scholarships ?

A.—Sri S. R. KANTHI (Minister for Education).—

(*a*) Nil. This scheme came into force only during the academic year 1961-62.

(*b*) Does not arise in view of reply to (*a* above.

(*c*) Government of India selects the candidates for the award of these scholarships purely on the basis of merit, *i.e.*, on the basis of the marks secured by the candidates in the several Public Examinations.

Sri SANJEEVANATH AIKALA.—I would like the Hon'ble Minister to give me the figures for 1961-62 also.

Mr. SPEAKER.—Yes, if he has got them he can give.

†Sri S. R. KANTHI.—I have got the figures. I also request that in answer at (*c*), an amendment may be made. Scholarships are awarded on the basis of merit-cum-means and not merit alone. In the year 1961-62 we got 105 scholarships, out of which post-Matric are 90, post-Intermediate 6, and post-Graduate 9.

Sri SANJEEVANATH AIKALA.—May I have distribution of the scholarships on districtwise basis ?

Sri S. R. KANTHI.—They are not given districtwise because they are given to the entire State and these are divided into regions. For the 1961 March Examinations, S. S. L. C., ex-Mysore area the number of First Classes were 2,456 and scholarships awarded are 45, S. S. L. C. Madras Karnatak area, 610 First Classes out of which 11 got scholarships, S. S. C. Bombay Karnatak Area, 1,811 got first class and and 33 got scholarships, H. S. C. Hyderabad Karnatak area, 270 got first classes and 7 scholarships were given. Scholarships are given on the number of first classes secured by each region.